


## ಮಿ. ನಂಬರ್

ಸ್ಮಾರ್ಟ್‌ಫೋನ್ ಇದ್ದಾಕ್ಷಣ ಎಲ್ಲರಿಂದಲೂ ಬರುವ ಕರೆಗಳನ್ನು ಸ್ವೀಕರಿಸಲೇಬೇಕೆಂದಿಲ್ಲ. ಕೆಲವರ ನಂಬರ್, ಏರಿಯಾ ಕೋಡ್‌ನಿಂದ ಬರುವ ಕರೆಗಳನ್ನು, ಸಂದೇಶಗಳನ್ನು ಬ್ಲಾಕ್ ಮಾಡಬಹುದು. ಇದಕ್ಕೆ ಗೂಗ್ಲ್ ಪ್ಲೇನಲ್ಲಿರುವ ಉಚಿತ ಆ್ಯಪ್ 'ಮಿ. ನಂಬರ್' ನೆರವು ನೀಡುತ್ತದೆ. ನಿಮಗೆ ಬೇಡವಾದ ನಂಬರ್‌ಗಳ ಪಟ್ಟಿ ಮಾಡಿ. ನಂಬರ್ ಗೊತ್ತಿಲ್ಲದಿದ್ದರೆ ಏರಿಯಾ ಕೋಡ್ ಸೇರಿಸಿ. ಸ್ಪಾಮ್‌ಗಳನ್ನೂ ಸೇರಿಸಬಹುದು. ಮಿ.ನಂಬರ್ ಇವುಗಳನ್ನು ಬ್ಲಾಕ್ ಮಾಡುತ್ತದೆ. ಇವುಗಳನ್ನು ಸೈಲೆಂಟ್ ಅಲರ್ಟ್ ಕಾಲ್‌ಗೆ ಬೇಕಾದರೂ ಬದಲಾಯಿಸಿಕೊಳ್ಳಬಹುದು. ಬ್ಲಾಕ್ ಮಾಡಿದ ಕರೆಗಳು ಕಾಲ್ ಹಿಸ್ಟರಿಯಲ್ಲಿ ಸೇರದೇ ಲಾಗ್‌ನಲ್ಲಿ ಮಾತ್ರ ಕಾಣಿಸುತ್ತವೆ. ಸಂದೇಶಗಳನ್ನೂ ಬ್ಲಾಕ್ ಮಾಡಬಹುದು.

## ಮೈಕ್ರೋಫೋನ್ ಟ್ಯಾಟೂ

ಮೋಟೊರೋಲ ಕಂಪೆನಿಯು ಸ್ಮಾರ್ಟ್‌ಫೋನ್‌ಗಾಗಿ ಮೈಕ್ರೋಫೋನ್ ಟ್ಯಾಟೂ ಹೊರತರಲು ಪೇಟೆಂಟ್ ಸಲ್ಲಿಸಿದೆ. ಈ ಟ್ಯಾಟೂವನ್ನು ಕತ್ತಿನ ಮೇಲೆ ಅಂಟಿಸಿಕೊಂಡರೆ ಸಾಕು, ವೈರ್‌ಲೆಸ್ ಮೈಕ್ರೋಫೋನ್‌ನಂತೆ ಕೆಲಸ ಮಾಡುತ್ತದೆ. ಇದು ಮೊಬೈಲ್ ಕಮ್ಯುನಿಕೇಶನ್ ಡಿವೈಸ್ ಆಗಿದ್ದು, ಏರಿಯಾ ನೆಟ್‌ವರ್ಕ್‌ನಿಂದ ಸಂಕೇತಗಳನ್ನು ಪಡೆಯುವ ಸಾಮರ್ಥ್ಯ ಹೊಂದಿದೆ. ಇದು ಶೀಘ್ರವೇ ಲಭ್ಯವಿದ್ದು, ಬ್ಲ್ಯೂಟೂಥ್ ಹಾಕಿಕೊಳ್ಳುವ ಅಗತ್ಯವಿಲ್ಲ.







## ಜಿಮೇಲ್ ಅಟ್ಯಾಚ್‌ಮೆಂಟ್

ನೀವು ಜಿಮೇಲ್ ಬಳಕೆದಾರರಾಗಿದ್ದರೆ ಮೇಲ್ ಅಟ್ಯಾಚ್‌ಮೆಂಟ್ ಅನ್ನು ನೇರವಾಗಿ ಗೂಗ್ಲ್ ಡ್ರೈವ್ ಕ್ಲೌಡ್ ಸ್ಟೋರೇಜ್‌ನಲ್ಲಿ ಕಾಪಿಡಬಹುದು. ಈ ರೀತಿ ಸೇವ್ ಮಾಡುವಾಗ ಬಳಕೆದಾರರು ಮೇಲ್‌ನಿಂದ ವಿಂಡೋಸ್‌ಗೆ ಬದಲಾಯಿಸುವ ಅವಶ್ಯಕತೆಯೂ ಇಲ್ಲ. ಈ ಮೊದಲು ಅಟ್ಯಾಚ್‌ಮೆಂಟ್ ಅನ್ನು ಡೌನ್‌ಲೋಡ್ ಮಾಡಿದ ನಂತರ ಅದನ್ನು ನೋಡಬಹುದಿತ್ತು. ಆದರೆ ಈಗ ನೇರವಾಗಿ ಡ್ರೈವ್ ಬಟನ್ ಬಳಸಿ ಡ್ರೈವ್‌ನಲ್ಲಿ ಸೇವ್ ಮಾಡಬಹುದು. ಅಲ್ಲೇ ನೇರವಾಗಿ ನೋಡಬಹುದು. ಈ ಸೇವೆ ಈ ವಾರ ಶುರುವಾಗಲಿದ್ದು, ಸದ್ಯ ಡೆಸ್ಕ್‌ಟಾಪ್ ಬಳಕೆದಾರರಿಗೆ ಮಾತ್ರ ಲಭ್ಯ.

## ಫೇಸ್‌ಬುಕ್‌ನ ಮೆಸೆಂಜರ್

ಫೇಸ್‌ಬುಕ್‌ನ ಈ ಹೊಸ ಆವೃತ್ತಿಯ ಆ್ಯಪ್ ಬಳಸುವವರು ಸ್ಮಾರ್ಟ್‌ಫೋನ್‌ನಲ್ಲಿ ತಕ್ಷಣವೇ ಸಂಪರ್ಕ ಪಡೆಯಬಹುದು. ಫೇಸ್‌ಬುಕ್‌ನಲ್ಲಿ ಸ್ನೇಹಿತರ ಪಟ್ಟಿಯಲ್ಲಿ ಇಲ್ಲದವರು ಕೂಡಾ ತಕ್ಷಣ ಸಂದೇಶ ಕಳಿಸಬಹುದು. ಕಾಂಟ್ಯಾಕ್ಟ್ಸ್‌ನಲ್ಲಿ ಇದ್ದವರ ಹೆಸರು ನೀಲಿ ಬಣ್ಣದಲ್ಲಿ ಮಿಂಚುತ್ತದೆ. ಹೀಗಾಗಿ ತಕ್ಷಣ ಗುರುತಿಸಬಹುದು. ಇದು ಅತ್ಯಂತ ವೇಗವಾಗಿ ಸಂದೇಶ ಕಳಿಸುತ್ತದೆ ಎಂಬುದು ಕಂಪೆನಿಯ ಅಂಬೋಣ. ಇದನ್ನು ವಾಟ್ಸ್‌ಅಪ್‌ಗೆ ಪೈಪೋಟಿ ನೀಡಲು ರೂಪಿಸಲಾಗಿದೆ ಎಂಬ ಮಾತೂ ಕೇಳಿ ಬರುತ್ತಿದೆ. ಸದ್ಯ ಆ್ಯಂಡ್ರಾಯ್ಡ್ ಬಳಸುವ ಕೆಲವು ಗ್ರಾಹಕರಿಗೆ ಮಾತ್ರ ಇದನ್ನು ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಆ್ಯಂಡ್ರಾಯ್ಡ್ ಮತ್ತು ಐಫೋನ್‌ನ ಎಲ್ಲಾ ಸದಸ್ಯರಿಗೂ ನೀಡಲಾಗುವುದು.

■ ಎಸ್. ತುಂಬೆ

